# ನಗರಸಭಾ ಕಾರ್ಯಾಲಯ, ಕಾರವಾರ

ನಂ.ನಸಕಾ:ಸ.ಸಾ.ಸ 2 / 2010-11 ದಿನಾಂಕ : 28. 05. 2010

## ಸರ್ವಸಾಧಾರಣ ಸಭೆಯ ತಿಳುವಳಿಕೆ ಪತ್ರ

ನಗರಸಭೆಯ ಯಾವತ್ತೂ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ, ದಿನಾಂಕ : 05. 06. 2010 ರಂದು ಬೆಳಿಗ್ಗೆ 11.00 ಗಂಟೆಗೆ ನಗರಸಭಾ ಸಭಾಂಗಣದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳುವ ಸಲುವಾಗಿ ಸರ್ವಸಾಧಾರಣ ಸಭೆಯನ್ನು ಕರೆಯಲಾಗಿದೆ. ಕಾರಣ ಸದ್ರಿ ದಿವಸ ಸಭೆಗೆ ಹಾಜರಿದ್ದು, ಈ ಕೆಳಗಿನ ವಿಷಯಗಳನ್ನು ಚರ್ಚಿಸಿ ನಿರ್ಣಯ ಕೈಕೊಳ್ಳುವರೇ ವಿನಂತಿಸಿದೆ.

## ಚರ್ಚಿಸತಕ್ಕ ವಿಷಯಗಳು

ವಿಷಯ ನಂ. 1 : ದಿನಾಂಕ : 30. 04. 2010 ರಂದು ಜರುಗಿದ ಸರ್ವಸಾಧಾರಣ ಸಭೆಗಳಲ್ಲಿ ಪಾಸಾದ ಠರಾವುಗಳನ್ನು ಓದಿ ಧೃಡೀಕರಿಸುವುದು.

ವಿಷಯ ನಂ. 2 : ನಗರಸಭೆಯ 2010 ಮಾರ್ಚ ನೇ ತಿಂಗಳ ಜಮಾ ಖರ್ಚುಗಳಿಗೆ ಮಂಜೂರಾತಿ ನೀಡುವ ಕುರಿತು ವಿಚಾರ.

ವಿಷಯ ನಂ. 3 : ನಗರಸಭೆಯ ಸೆಸ್‌ಫುಲ್ ಎಂಟಿಯರ್ ವಾಹನ ಸಂಖ್ಯೆ ಕೆಎ 30 / 1764 ನೇದನ್ನು ದುರುಸ್ತಿ ಮಾಡುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 4 : ನಗರಸಭೆಯ ಜೆ. ಸಿ. ಬಿ ವಾಹನ ಸಂಖ್ಯೆ ಕೆಎ 30 / 5686 ನೇದನ್ನು ದುರುಸ್ತಿ ಮಾಡುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 5 : ನಗರಸಭೆಯ ಅಟೋ ಟಿಪ್ಪರ ವಾಹನ ಸಂಖ್ಯೆ ಕೆಎ 30 / 6574 ನೇದನ್ನು ದುರುಸ್ತಿ ಮಾಡುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 6 : ನಗರಸಭೆಯ ಅಂಬಾಸಿಡರ್ ಕಾರ ವಾಹನ ಸಂಖ್ಯೆ ಕೆಎ 30 / 3464 ನೇದನ್ನು ದುರುಸ್ತಿ ಮಾಡುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 7 : ನಗರಸಭೆಯ ಶೇ. 18 ರ ಯೋಜನೆಯಡಿ ಹಬ್ಬುವಾಡದಲ್ಲಿ ನಿರ್ಮಿಸಿರುವ ಗ್ರಂಥಾಲಯದ ನಿರ್ವಹಣಾ ಉಸ್ತುವಾರಿ ನೋಡಿಕೊಳ್ಳುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 8 : 2010-11 ನೇ ಸಾಲಿಗೆ ನೈರ್ಮಲ್ಯ ವಿಭಾಗಕ್ಕೆ ಅವಶ್ಯಇವುರ ಸಾಮಗ್ರಿಗಳನ್ನು ಮತ್ತು ರಾಸಾಯನಿಕಗಳನ್ನು ಖರೀದಿಸುವ ಸಲುವಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 9 : ಟಾಟಾ ಕಂಪನಿಯ ಅಧಿಕೃತ ಡೀಲರಾದ ಅಸೋಷಿಯೇಟೆಡ್ ಕನ್‌ಸ್ಟ್ರಕ್ಷನ್ ಇಕ್ವೂಪಮೆಂಟ್, ಕಾರವಾರ ಇವರು ನಗರಸಭೆಯ ಟಾಟಾ ಜೆ. ಸಿ. ಬಿ. ವಾಹನ ನಂ. ಕೆಎ 30 / 5686 ನೇದಕ್ಕೆ ಸಾಮಗ್ರಿಗಳನ್ನು ಅಳವಡಿಸಿ ದುರುಸ್ತಿ ಮಾಡಿಸಿರುವ ಬಗ್ಗೆ ಬಂದ ಬಿಲ್ಲನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 10 : ನಗರಸಭೆಯ ವ್ಯಾಪ್ತಿಯಲ್ಲಿ ಕೋಣೆನಾಲಾವು ಸಮುದ್ರ ಸೇರುವ ಸ್ಥಳದಲ್ಲಿನ ಕೊಳವೆಯ ಮರಳು ತೆಗೆದು ತೆರವು ಮಾಡಲು ತಯಾರಿಸಿದ ಅಂದಾಜು ಪತ್ರಿಕೆ ರಕಂ ರೂ. 75,000/- ಗಳಿಗೆ ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಕೈಗೊಳ್ಳುವ ಕಾಮಗಾರಿಗೆ ಘಟನೋತ್ತರ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 11 : ನಗರಸಭೆ ವ್ಯಾಪ್ತಿಯಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ಸಗಳನ್ನು ಅಳವಡಿಸಿದ ಬಗ್ಗೆ ಪರಿಷ್ಕೃತ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವುದರ ಕುರಿತು ವಿಚಾರ.

ವಿಷಯ ನಂ. 12 : 2010 – 11 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಶೇಕಡಾ 22.75% ರ ಯೋಜನೆ ಅಡಿಯಲ್ಲಿ ಕಾದಿರಿಸಿದ ರಖಂ ರೂ. 15,00,000/- ಗಳಿಗೆ ಕ್ರಿಯಾ ಯೋಜನೆ ತಯಾರಿಸುವುದರ ಕುರಿತು ವಿಚಾರ.

ವಿಷಯ ನಂ. 13 : " ನಿರ್ಮಲಗಂಗಾ " – ಪರಿಶಿಷ್ಟ ಜಾತಿ / ಪರಿಶಿಷ್ಟ, ಪಂಗಡ ವರ್ಗದ ನಗರ ಪ್ರದೇಶದ ಬಡ ಕುಟುಂಬಗಳಿಗೆ ಉಚಿತ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕ ನೀಡುವುದರ ಕುರಿತು ವಿಚಾರ.

ವಿಷಯ ನಂ. 14 : ಅಧ್ಯಕ್ಷರ ಅನುಮತಿಯ ಮೇರೆಗೆ ಬರಬಹುದಾದ ಇತರೇ ವಿಷಯಗಳು.

ಅಧ್ಯಕ್ಷರ ಅನುಮತಿಯ ಮೇರೆಗೆ } ಪೌರಾಯುಕ್ತರು,

ನಗರಸಭೆ ಕಾರವಾರ